# ಕರ್ನಾಟಕ ವಿಧಾನ ಪರಿಷತ್ತು

**ಕರ್ನಾಟಕ ವಿಧಾನ ಪರಿಷತ್ತಿನ ಮಾನ್ಯ ಸದಸ್ಯರಾದ ಶ್ರೀ ಪುಟ್ಟಣ್ಣ ಇವರು ನಿಯಮ 72ರ ಮೇರೆಗೆ ನೀಡಿರುವ ಗಮನ ಸೆಳೆಯುವ ಸೂಚನೆ ಬಗ್ಗೆ**

---

**ವಿಷಯ:**

ಶಾಲಾ ಶಿಕ್ಷಣ ಇಲಾಖೆಯಲ್ಲಿ ಭೋಧಕೇತರ ವೃಂದದವರಿಗೆ ಮುಂಬಡ್ತಿ ನೀಡುವಲ್ಲಿ ಇಲಾಖೆಯ ಅಧಿಕಾರಿಗಳು ನಿಧಾನಗತಿಯ ಧೋರಣೆಯನ್ನು ಅನುಸರಿಸುತ್ತಿದ್ದಾರೆ. ಹಲವಾರು ಸಿಬ್ಬಂದಿ ವರ್ಗದವರು ವೃತ್ತಿ ಜೀವನದಲ್ಲಿ ಒಂದು ಬಡ್ತಿ ಪಡೆಯದೇ ನಿವೃತ್ತಿಯಾಗುತ್ತಿದ್ದಾರೆ. ಆದರೆ ಬೇರೆ ಇಲಾಖೆಯ ನೌಕರರು ಎರಡು ಮೂರು ಬಡ್ತಿಗಳನ್ನು ಪಡೆದು ನಿವೃತ್ತರಾಗುತ್ತಿದ್ದಾರೆ. ಶಾಲಾ ಶಿಕ್ಷಣ ಇಲಾಖೆಯಲ್ಲಿ ಬಡ್ತಿ ನೀಡುವ ಪ್ರಕ್ರಿಯೆಯನ್ನು ಹಲವು ವರ್ಷಗಳ ಕಾಲ ವಿಳಂಬ ಮಾಡುತ್ತಿದ್ದಾರೆ. ಆದ್ದರಿಂದ, ಮುಂಬಡ್ತಿ, ಗ್ರೂಪ್ ಡಿ ದರ್ಜೆಯಿಂದ ಉಪ ನಿರ್ದೇಶಕರು (ಬೋಧಕೇತರ) ಹಂತದವರೆಗಿನ ಕಾಲಕಾಲಕ್ಕೆ ಉದ್ಭವಾಗುವ ಎಲ್ಲಾ ಖಾಲಿ ಹುದ್ದೆಗಳಿಗೆ ಸಿಬ್ಬಂದಿ ಮತ್ತು ಆಡಳಿತ ಸುಧಾರಣಾ ಇಲಾಖೆಯ ಆದೇಶಗಳನ್ವಯ ನಿಯಮಾನುಸಾರ ಕನಿಷ್ಠ ವರ್ಷಕ್ಕೆ ಎರಡು ಬಾರಿಯಾದರೂ ಮುಂಬಡ್ತಿ ನೀಡಬೇಕೆಂಬ ವಿಷಯವನ್ನು ನಿಯಮ 72ರಲ್ಲಿ ಮಾನ್ಯ ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಇಲಾಖೆಯ ಸಚಿವರಲ್ಲಿ ಪ್ರಸ್ತಾಪಿಸುತ್ತೇನೆ.

**ಉತ್ತರ**

ಶಾಲಾ ಶಿಕ್ಷಣ ಇಲಾಖೆಯ ಬೋಧಕೇತರ ವೃಂದವರಿಗೆ ಮುಂಬಡ್ತಿಗಳನ್ನು ನೀಡಲು ಯಾವುದೇ ವಿಳಂಬ ನೀತಿ ಅನುಸರಿಸಿರುವುದಿಲ್ಲ. ಕಾಲ ಕಾಲಕ್ಕೆ ಉದ್ಭವವಾಗುವ ಹಾಗೂ ಮುಂಬಡ್ತಿ ಪ್ರಕ್ರಿಯೆಯಲ್ಲಿ ಬಡ್ತಿಯನ್ನು ಮುಂದೂಡುವ ನೌಕರರಿಂದ ಮತ್ತು ಬಡ್ತಿ ನಂತರ ನಿವೃತ್ತಿ, ನಿಧನ ಹಾಗೂ ಇನ್ನಿತರ ಕಾರಣಗಳಿಂದ ತೆರವಾದ ರಿಕ್ತ ಸ್ಥಾನಗಳಿಗೆ ಮುಂಬಡ್ತಿಯನ್ನು ನೀಡಲು ಕ್ರಮವಹಿಸಲಾಗುತ್ತಿದೆ. ಅಲ್ಲದೆ ಕಳೆದ 03 ವರ್ಷಗಳಲ್ಲಿ ಬೋಧಕೇತರ ವೃಂದದ ಅಧಿಕಾರಿ/ನೌಕರರುಗಳಿಗೆ ಬಡ್ತಿ ನೀಡಿದ ಹುದ್ದೆವಾರು ವಿವರಗಳನ್ನು **ಅನುಬಂಧದಲ್ಲಿ** ಒದಗಿಸಿದೆ. ವೃಂದ ಮತ್ತು ನೇಮಕಾತಿ ನಿಯಮಗಳಲ್ಲಿ ನಿಗದಿಪಡಿಸಿರುವ ಮಾನದಂಡಗಳನ್ವಯ ಬಡ್ತಿಯನ್ನು ನೀಡಲು ಕ್ರಮವಹಿಸಲಾಗುತ್ತಿದೆ.

ಪ್ರಸಕ್ತ ಸಾಲಿನಲ್ಲಿ ಮುಂಬಡ್ತಿ ಪ್ರಕ್ರಿಯೆ ಚಾಲ್ತಿಯಲ್ಲಿದ್ದು ಕಾರ್ಯನಿರ್ವಹಣಾ ವರದಿ ಪರಿಶೀಲನಾ ಹಂತದಲ್ಲಿರುವುದರಿಂದ ಶೀಘ್ರದಲ್ಲಿ ಬೋಧಕೇತರ ವೃಂದದ ಎಲ್ಲಾ ಹುದ್ದೆಗಳಿಗೆ ಮುಂಬಡ್ತಿ ನೀಡಲು ಕ್ರಮವಹಿಸಲಾಗುತ್ತದೆ.

**ಸಂಖ್ಯೆ: ಇಪಿ/ 450 /ಎಸ್‌ಟಿಬಿ /2025**

**(ಎಸ್. ಮಧು ಬಂಗಾರಪ್ಪ)**
ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಸಚಿವರು

ಅನುಬಂಧ-ಎ

## ಶಾಲಾ ಶಿಕ್ಷಣವ್ಯಾಪ್ತಿಯಲ್ಲಿರುವ ಆಯುಕ್ತಾಲಯವಾರು ಕಳೆದ 03 ವರ್ಷಗಳಲ್ಲಿ ಬೋಧಕೇತರ ನೌಕರರಿಗೆ ಬಡ್ತಿ ನೀಡಿದ ಹುದ್ದೆವಾರು ವಿವರಗಳು

| ಕ್ರ ಸಂ | ವೃಂದ | 2022-23 | | | 2023-24 | | | 2024-25 | | |
|---|---|---|---|---|---|---|---|---|---|---|
| | | ಬೆಂ | ಧಾ | ಕ | ಬೆಂ | ಧಾ | ಕ | ಬೆಂ | ಧಾ | ಕ |
| 01 | ಉಪನಿರ್ದೇಶಕರು | 0 | 0 | 0 | 2 | 0 | 0 | 0 | 0 | 0 |
| 02 | ಹಿರಿಯ ಸಹಾಯಕ ನಿರ್ದೇಶಕರು | 0 | 0 | 0 | 2 | 0 | 0 | 2 | 0 | 0 |
| 03 | ಪತ್ರಾಂಕಿತ ಸಹಾಯಕರು | 4 | 2 | 1 | 6 | 3 | 4 | 3 | 4 | 1 |
| 04 | ಪತ್ರಾಂಕಿತ ವ್ಯವಸ್ಥಾಪಕರು | 47 | 16 | 5 | 46 | 16 | 9 | 21 | 10 | 5 |
| 05 | ಲೆಕ್ಕಾಧೀಕ್ಷಕರು | 0 | 0 | 0 | 0 | 2 | 0 | 6 | 1 | 20 |
| 06 | ಅಧೀಕ್ಷಕರು | 192 | 23 | 28 | 0 | 23 | 0 | 73 | 22 | 0 |
| 07 | ಪ್ರ.ದ.ಸ | 231 | 0 | 31 | 0 | 45 | 0 | 136 | 41 | 0 |
| 08 | ದ್ವಿ.ದ.ಸ/ಸಿ.ಸಿ.ಟಿ | 0 | 10 | 22 | 0 | 4 | 0 | 21 | 26 | 64 |
| 09 | ಹಿರಿಯ ವಾಹನ ಚಾಲಕರು | 19 | 0 | 0 | 25 | 0 | 0 | 00 | 13 | 8 |

ಬೆ: ಬೆಂಗಳೂರು ಆಯುಕ್ತಾಲಯ

ಧಾ: ಧಾರವಾಡ ವಿಭಾಗ

ಕ: ಕಲಬುರಗಿ ವಿಭಾಗ

Naga

ಹಿರಿಯ ಸಹಾಯಕ ನಿರ್ದೇಶಕರು (ಆಡಳಿತ)
ಆಯುಕ್ತರ ಕಛೇರಿ, ಶಾಶಿಇ, ಬೆಂಗಳೂರು

Scanned with OKEN Scanner